## ಶ್ರೀಮತಿ ಬಾನು ಮುಷ್ತಾಕ್



ಶ್ರೀಮತಿ ಬಾನುಮುಷ್ತಾಕ್ ಅವರು ೧೯೪೮ನೇ ಏಪ್ರಿಲ್ ೩ ರಂದು ಹಾಸನದಲ್ಲಿ ಜನಿಸಿ, ತಮ್ಮ ಪ್ರೌಢ ಶಿಕ್ಷಣವನ್ನು ೧೯೬೩ರಲ್ಲಿ ಚಾಮರಾಜನಗರದಲ್ಲಿ ಮುಗಿಸಿದರು. ಹಾಸನದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ೧೯೬೬ರಲ್ಲಿ ಬಿ.ಎಸ್ಸಿ. ಪದವಿಯನ್ನು ಮುಗಿಸಿ, ಎಲ್‌ಎಲ್.ಬಿ. ಪದವಿಯನ್ನು ಎ. ರಾಮಕೃಷ್ಣ ಲಾ ಕಾಲೇಜು, ಹಾಸನದಲ್ಲಿ, ವಿವಾಹವಾದ ನಂತರ ೧೯೯೦ರಲ್ಲಿ ಪೂರ್ಣಗೊಳಿಸಿದರು. ೧೯೮೧ ರಿಂದ ೧೯೯೦ ರವರೆಗೆ ಪಿ. ಲಂಕೇಶ್ ಪತ್ರಿಕೆಗೆ ಹಾಸನ ಜಿಲ್ಲಾ ಪತ್ರಿಕಾವರದಿಗಾರ್ತಿಯಾಗಿ ಸೇವೆಸಲ್ಲಿಸಿದ್ದಾರೆ. ಇದೇ ಅವಧಿಯಲ್ಲಿ ಹಾಸನ ನಗರ ಸಭೆಯಲ್ಲಿ ಸಭಾ ಸದಸ್ಯೆಯಾಗಿ, ಜಿಲ್ಲಾ ಆಸ್ಪತ್ರೆಯ ಸಂದರ್ಶಕರ ಮಂಡಳಿಯ ಅಧ್ಯಕ್ಷೆಯಾಗಿ, ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸದಸ್ಯೆಯಾಗಿ ಮುಂತಾದ ಸಾರ್ವಜನಿಕ ಸೇವಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಆಗಿನಿಂದಲೂ ಸಾಹಿತ್ಯ ಕ್ಷೇತ್ರದಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದ ಬಾನು ಅವರು, ೧೯೯೦ರಲ್ಲಿ ವಕೀಲ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಜೊತೆಜೊತೆಯಲ್ಲೇ ಅವರು ಸಾಹಿತ್ಯ ಕೇತ್ರದ ವಿವಿಧ ಆಯಾಮಗಳಲ್ಲಿ ವಿಶೇಷ ಕೊಡುಗೆಯನ್ನು ನೀಡುತ್ತಾ ಬಂದಿದ್ದಾರೆ. ನಮ್ಮ ನಾಡಿನ ಅಪೂರ್ವ ಕನ್ನಡಾಭಿಮಾನಿಗಳಾದ ಬಾನು ಅವರು ಕಥೆ, ಕಾದಂಬರಿ, ಲೇಖನ, ಕಾನೂನು, ಕಾವ್ಯ, ಅನುವಾದ ಕ್ಷೇತ್ರಗಳಿಗೆ ಕೊಡುಗೆ ನೀಡಿದ್ದಾರೆ. "ಕುಬ್ರ" ಅವರ ಕಾದಂಬರಿ, "ಕೌಟುಂಬಿಕ ದೌರ್ಜನ್ಯ ತಡೆಕಾಯಿದೆ" ಅವರ ಕಾನೂನು ಗ್ರಂಥ. ಇವರ ಕಥೆಗಳು ಹಿಂದಿ, ಉರ್ದು, ಪಂಜಾಬಿ ಮತ್ತು ಇಂಗ್ಲೀಷ್ ಭಾಷೆಗಳಿಗೂ ಅನುವಾದಗೊಂಡಿವೆ.

ಮೂರು ರಾಷ್ಟ್ರಪ್ರಶಸ್ತಿಗಳನ್ನು ಪಡೆದಿರುವ "ಹಸೀನಾ" ಕನ್ನಡ ಚಲನ ಚಿತ್ರವು, ಬಾನು ಅವರ "ಕರಿನಾಗರಗಳು" ಎಂಬ ಸಣ್ಣ ಕಥೆಯನ್ನು ಆಧರಿಸಿ, ಗಿರೀಶ್ ಕಾಸರವಳ್ಳಿ ಮತ್ತು ಶ್ರೀಮತಿ ತಾರಾ ಅವರು ತೆರೆಗೆ ತಂದ ಚಲನಚಿತ್ರ.

ಶ್ರೀಮತಿ ಬಾನು ಮುಷ್ತಾಕ್ ಅವರಿಗೆ ಲಭ್ಯವಾದ ಪ್ರಶಸ್ತಿಗಳು ಹಲವಾರು : ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (೨೦೦೪), ಕರ್ನಾಟಕ ರಾಜ್ಯ ಪ್ರಶಸ್ತಿ (ಸಾಹಿತ್ಯ–೨೦೦೨), ಬೆಂಕಿಮಳೆ ಕಥಾ ಸಂಕಲನಕ್ಕೆ ೨೦೦೨ರಲ್ಲಿ ಸುಧಾಮೂರ್ತಿ ಪ್ರಶಸ್ತಿ, ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ (೨೦೦೪ರಲ್ಲಿ ಶಾಶ್ವತಿ ಸಂಸ್ಥೆ), ಕರ್ನಾಟಕ ಸರ್ಕಾರದ ಅಡ್ವೋಕೇಟ್ ಜನರಲ್ ಅವರ ಕಛೇರಿಯಿಂದ ೨೦೧೪ರಲ್ಲಿ "ಜೀವಮಾನದ ಸಾಧನೆ ಪ್ರಶಸ್ತಿ, ದಾವಣಗೆರೆ ಬಸವ ಕೇಂದ್ರದಿಂದ ೨೦೧೩ರಲ್ಲಿ "ಶೂನ್ಯಪೀಠ ಅಕ್ಕನಾಗಮ್ಮ ಪ್ರಶಸ್ತಿ" ಮುಂತಾದ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಇವರ "ಒಮ್ಮೆ ಹೆಣ್ಣಾಗು ಪ್ರಭುವೆ" ಕಥೆಯು ಗುಲ್ಬರ್ಗಾ ಮತ್ತು ತುಮಕೂರು ವಿಶ್ವವಿದ್ಯಾಲಯಗಳಲ್ಲಿ ಪದವಿ ತರಗತಿಗಳ ಪಠ್ಯಪುಸ್ತಕದಲ್ಲಿ ಸೇರ್ಪಡೆಯಾಗಿದೆ.

ಅಪೂರ್ವ ವಿದ್ವಾಂಸರೂ, ಸಾಹಿತಿಗಳೂ ಆದ ಇವರಿಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು 'ಶ್ರೀಮತಿ ಸಾವಿತ್ರಮ್ಮ – ಪ್ರೊ|| ಎಂ.ವಿ.ಸೀ. ಸಾಹಿತ್ಯ ಪುರಸ್ಕಾರ–೨೦೧೫' ಅನ್ನು ನೀಡಲು ಸಂತೋಷಿಸುತ್ತದೆ.

# ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ (ರಿ.)


**ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ**

**ಬಿ.ಎಂ.ಶ್ರೀ ಕಲಾಭವನ,** ೩ನೇ ಮುಖ್ಯರಸ್ತೆ,

ನರಸಿಂಹರಾಜ ಕಾಲೋನಿ, ಬೆಂಗಳೂರು–೫೬೦ ೦೧೯

ದೂರವಾಣಿ : ೨೬೬೧೫೮೭೭, ೨೬೬೭೬೭೭೩


## ಶ್ರೀಮತಿ ಸಾವಿತ್ರಮ್ಮ – ಪ್ರೊ|| ಎಂ.ವಿ.ಸೀ. ಸಾಹಿತ್ಯ ಪುರಸ್ಕಾರ ಪ್ರದಾನ ಸಮಾರಂಭ

**ದಿನಾಂಕ : ೧೯–೦೯–೨೦೧೫ ಶನಿವಾರ ಸಂಜೆ ೬–೦೦ ಕ್ಕೆ**

**ಸ್ಥಳ : ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ**

**ತಾವೂ ಬನ್ನಿ, ಸಂಗಾತಿಗಳನ್ನೂ ಕರೆತನ್ನಿ**

**ಡಾ|| ಪಿ. ವಿ. ನಾರಾಯಣ**
ಅಧ್ಯಕ್ಷರು

**ಪ್ರೊ|| ಎಂ. ಎಚ್. ಕೃಷ್ಣಯ್ಯ**
ಗೌರವಾಧ್ಯಕ್ಷರು

**ಪ್ರೊ|| ಜಿ. ಅಬ್ದುಲ್ ಬಷೀರ್**
**ಶ್ರೀ ಬಿ. ಆರ್. ರವೀಂದ್ರನಾಥ್**
ಗೌ|| ಕಾರ್ಯದರ್ಶಿಗಳು

**ಶ್ರೀ ಎಂ.ಎಸ್. ರಾಮಪ್ರಸಾದ್**
ಗೌ|| ಕೋಶಾಧಿಕಾರಿಗಳು

## ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ



ಪ್ರೊ॥ ಎಂ.ವಿ. ಸೀತಾರಾಮಯ್ಯನವರು ದಿನಾಂಕ: ೦೬–೦೫–೧೯೭೯ ರಂದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು ಸ್ಥಾಪಿಸಿದರು; ಕುವೆಂಪು ಅವರು ದಿನಾಂಕ: ೧೦–೦೩–೧೯೮೦ ರಂದು ಉದ್ಘಾಟನೆಯನ್ನು ಮಾಡಿದರು. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಕರ್ನಾಟಕದ ಹೆಸರಾಂತ ಸಾಹಿತ್ಯ ಪರಿಚಾರಕ ಸಂಸ್ಥೆಯಾಗಿ ಬೆಳೆದಿದೆ. ಕರ್ನಾಟಕ ಸರ್ಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸಾರ್ವಜನಿಕರ ಉದಾರ ನೆರವಿನಿಂದ ಸ್ವಂತ ಕಟ್ಟಡವನ್ನು ಹೊಂದಿರುವ ಪ್ರತಿಷ್ಠಾನವು ಪ್ರೊ॥ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮುಖಾಂತರ ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆಯನ್ನು ಪಡೆದ ಸಂಶೋಧನ ಕೇಂದ್ರವಾಗಿ ಎಂ.ಫಿಲ್. ತರಗತಿಗಳನ್ನು ನಡೆಸುತ್ತಿದೆ ಮತ್ತು ಪಿಎಚ್.ಡಿ. ಅಭ್ಯರ್ಥಿಗಳಿಗೆ ಮಾರ್ಗದರ್ಶನವನ್ನು ನೀಡುತ್ತಿದೆ. ಹಸ್ತಪ್ರತಿ ಸಂಗ್ರಹ ಮತ್ತು ಅಧ್ಯಯನ, ಹಳಗನ್ನಡ ಓದುಗಳನ್ನು ಪ್ರೋತ್ಸಾಹಿಸುವ ಶಿಬಿರಗಳನ್ನೂ ಸಮಾವೇಶಗಳನ್ನೂ ಅಭಿಯಾನಗಳನ್ನೂ ಪ್ರತಿಷ್ಠಾನ ನಡೆಸುತ್ತಿದೆ. ಸಾಹಿತ್ಯೋಪಾಸಕರು ಉಪನ್ಯಾಸ ಮಾಲೆ, ದತ್ತಿ ಉಪನ್ಯಾಸಗಳು, ಸಿರಿಸಂಗೀತ ಹಾಗೂ ವಿಚಾರ ಗೋಷ್ಠಿಗಳ ಮುಖಾಂತರ ವಿಚಾರ ವಿವೇಚನೆಗೆ ವೇದಿಕೆಯನ್ನೊದಗಿಸುತ್ತಿದೆ. ಆರು ತಿಂಗಳಿಗೊಮ್ಮೆ 'ಕರ್ನಾಟಕ ಲೋಚನ' ಎಂಬ ವಿದ್ವತ್ ಪತ್ರಿಕೆಯನ್ನೂ ಮೂರು ತಿಂಗಳಿಗೊಮ್ಮೆ 'ವಾರ್ತಾಪತ್ರ'ವನ್ನೂ ಹೊರತರುತ್ತಿದೆ. ಅಪರೂಪದ ಗ್ರಂಥಗಳನ್ನೊಳಗೊಂಡ ಗ್ರಂಥಾಲಯ ಮತ್ತು ಸಾವಿರಾರು ಹಸ್ತಪ್ರತಿಗಳ ಸಂಗ್ರಹವಿರುವ ಹಸ್ತಪ್ರತಿ ಸಂಗ್ರಹಾಲಯಗಳು ನಿರಂತರ ಚಿಂತನೆಗೆ ಭೂಮಿಕೆಯನ್ನೊದಗಿಸಿವೆ. ಬೆಲೆಬಾಳುವ ನೂರಾರು ಗ್ರಂಥಗಳನ್ನು ಹೊರತಂದಿರುವ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಕರ್ನಾಟದ ಸಾಹಿತಿಗಳ, ವಿದ್ವಾಂಸರ ಹಾಗೂ ಸಂಶೋಧಕರ ಮೆಚ್ಚುಗೆ ಮತ್ತು ಸಾರ್ವಜನಿಕರ ಪ್ರೋತ್ಸಾಹ, ಬೆಂಬಲಗಳಿಂದ ಮುನ್ನಡೆಯುತ್ತಿದೆ.

**ಶ್ರೀಮತಿ ಸಾವಿತ್ರಮ್ಮ – ಪ್ರೊ॥ ಎಂ.ವಿ.ಸೀ. ಸಾಹಿತ್ಯ ಪುರಸ್ಕಾರ:** ಹೊಸಗನ್ನಡದ ಹೆಸರಾಂತ ಸಂಶೋಧಕರೂ ಕವಿಗಳೂ ವಿಮರ್ಶಕರೂ ಆದವರು ದಿವಂಗತ ಪ್ರೊ॥ ಎಂ.ವಿ.ಸೀತಾರಾಮಯ್ಯನವರು; ಅವರ ಸಹಧರ್ಮಿಣಿಯವರು ಶ್ರೀಮತಿ ಸಾವಿತ್ರಮ್ಮನವರು. ಅವರ ಮಕ್ಕಳಾದ ಶ್ರೀ ಎಂ.ಎಸ್. ಭಾಸ್ಕರ್, ಶ್ರೀ ಎಂ.ಎಸ್. ರಾಮಪ್ರಸಾದ್, ಶ್ರೀ ಎಸ್.ಟಿ. ರಾಧಾಕೃಷ್ಣ ಮತ್ತು ಶ್ರೀ ಎಂ.ಎಸ್. ಶೇಷಾದ್ರಿನಾಥ್ ಅವರು 'ಶ್ರೀಮತಿ ಸಾವಿತ್ರಮ್ಮ–ಪ್ರೊ॥ ಎಂ.ವಿ.ಸೀ. ಸಾಹಿತ್ಯ ಪುರಸ್ಕಾರವನ್ನು' ಪ್ರತಿವರ್ಷ ನೀಡಲು ಐದು ಲಕ್ಷ ರೂಪಾಯಿಗಳ ದತ್ತಿಯೊಂದನ್ನು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿ ಸ್ಥಾಪಿಸಿದ್ದಾರೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಗಣನೀಯ ಕೊಡುಗೆಯನ್ನು ನೀಡಿರುವ ಸಾಹಿತಿಯೊಬ್ಬರಿಗೆ ನೀಡುವ ಮೂವತ್ತು ಸಾವಿರ ರೂಪಾಯಿ ನಗದು ಮತ್ತು ಫಲಕವನ್ನೊಳಗೊಂಡ ಪುರಸ್ಕಾರವಿದು. ಡಾ॥ ಬೈರಮಂಗಲ ರಾಮೇಗೌಡ, ಡಾ॥ ಜಿ.ಬಿ. ಹರೀಶ್ ಮತ್ತು ಡಾ॥ ಎನ್.ಆರ್. ಲಲಿತಾಂಬ ಅವರನ್ನೊಳಗೊಂಡ ಹಿರಿಯ ವಿಮರ್ಶಕ–ವಿದ್ವಾಂಸರ ಸಮಿತಿಯು ಈ ವರ್ಷದ ಪುರಸ್ಕಾರಕ್ಕೆ ಶ್ರೀಮತಿ ಬಾನುಮುಷ್ತಾಕ್ ಅವರನ್ನು ಆಯ್ಕೆ ಮಾಡಿದೆ.

## ಶ್ರೀಮತಿ ಸಾವಿತ್ರಮ್ಮ–ಪ್ರೊ॥ ಎಂ.ವಿ.ಸೀ. ಸಾಹಿತ್ಯ ಪುರಸ್ಕಾರ ಪ್ರದಾನ ಸಮಾರಂಭ

**ಪ್ರಾಸ್ತಾವಿಕನುಡಿ**

**ಡಾ॥ ಪಿ.ವಿ. ನಾರಾಯಣ**

ಅಧ್ಯಕ್ಷರು, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

**ಪುರಸ್ಕಾರ ಸ್ವೀಕರಿಸುವವರು**

**ಶ್ರೀಮತಿ ಬಾನು ಮುಸ್ತಾಕ್**

**ಪ್ರಶಸ್ತಿ ಪ್ರದಾನ ಮತ್ತು ಅಧ್ಯಕ್ಷತೆ**

**ಡಾ॥ ಕೆ. ಮರುಳಸಿದ್ದಪ್ಪ**

ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷರು,
ಖ್ಯಾತ ವಿಮರ್ಶಕರು

**ಅಭಿನಂದನ ನುಡಿಗಳು**

**ಡಾ॥ ಎನ್.ಆರ್. ಲಲಿತಾಂಬ**

ಕನ್ನಡ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು,
ವಿಜಯನಗರ